# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೨ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೯೧<br>No. 591 |


### ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
### ಅಧಿಸೂಚನೆ
### ಸಂಖ್ಯೆ: ಸಂವ್ಯಶಾಇ 51 ಶಾಸನ 2025, ಬೆಂಗಳೂರು, ದಿನಾಂಕ: 12.09.2025

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 74 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 74

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ರ ಕರ್ನಾಟಕ ಅಧಿನಿಯಮ 17)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು

ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ, ಖಂಡ (ವೈ) ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆಡ್) "**ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು"** ಎಂದರೆ ಅಧಿನಿಯಮದ ಪ್ರಕರಣ 17ಬಿ ರಲ್ಲಿ ನಿರ್ದಿಷ್ಟಪಡಿಸಿದಂತೆ."

**3. ಪ್ರಕರಣ 17ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 17ರಲ್ಲಿ ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಪತ್ತಿನ ಚಟುವಟಿಕೆ ನಡೆಸುವ ಯಾವುದೇ ಸಹಕಾರಿಯು ತಾನು ಸಂಗ್ರಹಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಹೂಡಿಕೆಯ ಹೊರತಾಗಿ ಯಾವುದೇ ಪತ್ತೇತರ ಚಟುವಟಿಕೆಗೆ ವಿನಿಯೋಗಿಸತಕ್ಕದ್ದಲ್ಲ".

**4. ಹೊಸ ಪ್ರಕರಣ 17ಬಿ ನ ಸೇರ್ಪಡೆ.-** ಮೂಲ ಅಧಿನಿಯಮದ ಪ್ರಕರಣ 17ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:-

"**17ಬಿ. ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು ನಿರ್ವಹಣೆ.-** ಸೌಹಾರ್ದ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರಿಯು ಪ್ರತಿ ಸಹಕಾರಿ ವರ್ಷದ ಅಂತ್ಯಕ್ಕೆ ಹೊಂದಿರುವ ಒಟ್ಟು ಠೇವಣಿಯ ಶೇ.20 ರಷ್ಟನ್ನು ರಾಜ್ಯ ಶಾಸನಬದ್ಧ ದ್ರವ್ಯತಾ ಮೀಸಲು ರೂಪದಲ್ಲಿ ಕಡ್ಡಾಯವಾಗಿ ಪ್ರಕರಣ 18ರಂತೆ ನಿರ್ವಹಣೆ ಮಾಡತಕ್ಕದ್ದು."

**5. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**18.ನಿಧಿಗಳ ಹೂಡಿಕೆ.-** ಸಹಕಾರಿಯ ತಕ್ಷಣದ ಬಳಕೆಗೆ ಅಗತ್ಯವಾಗಿರದಂಥ ಅದರ ನಿಧಿಗಳನ್ನು ಅದರ ವ್ಯವಹಾರದ ಹೊರಗೆ ಹೂಡತಕ್ಕದ್ದು ಅಥವಾ ಠೇವಣಿ ಇರಿಸತಕ್ಕದ್ದು, ಎಂದರೆ:-

(ಎ) ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ. ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ ಅಥವಾ ಪಟ್ಟಣ ಸಹಕಾರಿ ಬ್ಯಾಂಕ್ ; ಮತ್ತು

(ಬಿ) ರಿಜಿಸ್ಟ್ರಾರ್ ಅವರ ಪೂರ್ವಾನುಮತಿಯೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಕ್ಕೊಳಪಡುವ ಯಾವುದೇ ಶೆಡ್ಯೂಲ್ಡ್ ಬ್ಯಾಂಕ್.";

**6. ಪ್ರಕರಣ 20-ಬಿ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 20-ಬಿ ರ, ಖಂಡ (ಸಿ) ರಲ್ಲಿನ ಉಪ ಖಂಡ **(ii)**ರ ತರುವಾಯ ಮುಂದಿನ ಉಪ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(iii) ಈ ಅಧಿನಿಯಮ ಅಥವಾ ಅದರಡಿ ರಚಿಸಿದ ಉಪ ವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, ಮಾಧ್ಯಮಿಕ ಸಹಕಾರಿ, ಫೆಡರಲ್ ಸಹಕಾರಿ ಅಥವಾ ಅಪೆಕ್ಸ್ ಸಹಕಾರಿಗಳ ಮಂಡಲಿಯ ಚುನಾವಣೆಯಲ್ಲಿ ಮೀಸಲಾತಿ ಸ್ಥಾನಗಳಿಗೆ, ಸದರಿ ಸಹಕಾರಿಗಳ ಯಾವುದೇ ಮತದಾರರ ವರ್ಗದವರಾದರೂ ನಿಯಮಿಸಬಹುದಾದ ವಿಧಾನದಲ್ಲಿ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರತಕ್ಕದ್ದು."

**7. ಪ್ರಕರಣ 23ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 23 ರಲ್ಲಿ, ಉಪಪ್ರಕರಣ (3)ರ ಖಂಡ (ಕೆ-3) ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಕೆ-4) ಸಹಕಾರಿಯಿಂದ ಸಾಲ ಪಡೆದ ಎಲ್ಲ ಆಡಳಿತ ಮಂಡಲಿಯ ನಿರ್ದೇಶಕರು ಹಾಗೂ ಇತರೆ ಅಗ್ರ ಇಪ್ಪತ್ತು ಸುಸ್ತಿಯಾದ ಸಾಲಗಾರರ ಪುನರೀಕ್ಷಣೆ."

**8. ಪ್ರಕರಣ 24ರ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದ ಪ್ರಾರಂಭದ ಖಂಡಿಕೆ ಮತ್ತು (1)ನೇ ಖಂಡ ಹಾಗೂ ಅದರ ನಮೂದುಗಳವ ಬದಲಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಸೌಹಾರ್ದ ಸಹಕಾರಿ ಮಂಡಲಿಯು ಮುಖ್ಯ ಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಹದಿಮೂರಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಹೊಂದಿರತಕ್ಕದ್ದು, ಆದರೆ ನಿಯಮಿಸಬಹುದಾದಂತೆ ಸದಸ್ಯರ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

ಪರಂತು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಪ್ರತಿಯೊಂದು ಪ್ರಾಥಮಿಕ, ಮಾಧ್ಯಮಿಕ ಅಥವಾ ಒಕ್ಕೂಟ ಮತ್ತು ಅಪೆಕ್ಸ್ ಸಹಕಾರಿಗಳ ಸಂಘದ ಮಂಡಲಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು ಮೀಸಲಿಡತಕ್ಕದ್ದು.

ಮತ್ತು ಪರಂತು ಮಾಧ್ಯಮಿಕ ಅಥವಾ ಒಕ್ಕೂಟ ಮತ್ತು ಸಂಯುಕ್ತ ಸಹಕಾರಿ ಆಡಳಿತ ಮಂಡಲಿಯಲ್ಲಿ ನಿರ್ದೇಶಕರ ಸಂಖ್ಯೆಯ ಗರಿಷ್ಟ ಪ್ರಮಾಣವು 24ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಗತ್ಯಬಿದ್ದರೆ, ರಿಜಿಸ್ಟ್ರಾರರ ಪೂರ್ವಾನುಮೋದನೆಯೊಂದಿಗೆ ಗರಿಷ್ಟ ಸಂಖ್ಯೆಯನ್ನು ಆಯಾ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಿಗದಿಪಡಿಸಿಕೊಳ್ಳತಕ್ಕದ್ದು.

ಅಲ್ಲದೇ ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯ ಕ್ಷೇತ್ರದಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು, ಹಾಗೆ ಸಹಮತದಿಂದ ಸೇರಿಸಿಕೊಂಡ ಅಂಥ ಸಹಮತದ ಸದಸ್ಯರು ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಅಲ್ಲದೇ ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಟ ಸಂಖ್ಯೆಯ ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯು ಅವಶ್ಯವಿದ್ದಲ್ಲಿ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂಥ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು."

**9. ಪ್ರಕರಣ 25ರ ತಿದ್ದುಪಡಿ.-** ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿ ಉಪ-ಪ್ರಕರಣ (1) ರ ಖಂಡ (ಎಫ್) ತರುವಾಯ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜಿ) ಪ್ರತಿ ಸಹಕಾರಿ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವನ/ಅವಳ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಣೆ ಪಟ್ಟಿಯನ್ನು ಘೋಷಿಸಲು ಅಥವಾ ಸಲ್ಲಿಸಲು ವಿಫಲವಾದರೆ;

**ವಿವರಣೆ.-** ಈ ಖಂಡದ ಉದೇಶಕ್ಕಾಗಿ 'ಕುಟುಂಬ' ಎಂದರೆ ನಿರ್ದೇಶಕ ಮತ್ತು ಅವನ/ಅವಳ ಪತಿ/ಪತ್ನಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ. "

**10. ಪ್ರಕರಣ 26ರ ತಿದ್ದುಪಡಿ.-** ಮೂಲ ಅಧಿನಿಯಮದ, 26ನೇ ಪ್ರಕರಣದಲ್ಲಿ,-

**(i)** ಉಪ-ಪ್ರಕರಣ (1) ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಮಂಡಲಿಯ ಚುನಾವಣೆಗೆ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ನಾಮಪತ್ರ ಸಲ್ಲಿಸುವಾಗ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

"(1ಬಿ) ಮಂಡಲಿಯ ಪ್ರತಿಯೊಬ್ಬ ಚುನಾಯಿತ ನಿರ್ದೇಶಕ ಆತನ ಅಧಿಕಾರಾವಧಿಯ ಪ್ರತಿ ಹಣಕಾಸು ವರ್ಷದ ಅಂತ್ಯಕ್ಕೆ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು.

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಅಭ್ಯರ್ಥಿ, ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

(ii) ಉಪಪ್ರಕರಣ (2) ರ ಬದಲಿಗೆ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸೌಹಾರ್ದ ಸಹಕಾರಿ ಸಂಘಗಳ ಚುನಾವಣೆಗಳನ್ನು ನಡೆಸುವ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ಸಹಕಾರಿ ಚುನಾವಣಾ ಪ್ರಾಧಿಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು".

**11. ಪ್ರಕರಣ 27ರ ತಿದ್ದುಪಡಿ.-** ಮೂಲ ಅಧಿನಿಯಮದ 27ನೇ ಪ್ರಕರಣದ ಖಂಡ (ಜೆ) ನ ತರುವಾಯ ಈ ಮುಂದಿನ ಖಂಡಗಳಾದ (ಕೆ), (ಎಲ್) ಮತ್ತು (ಎಮ್) ಅನ್ನು ಸೇರಿಸತಕ್ಕದ್ದು, ಎಂದರೆ:-

"(ಕೆ) ಮಂಡಲಿಯ ಪ್ರತಿಯೊಬ್ಬ ಚುನಾಯಿತ ನಿರ್ದೇಶಕರು ತಮ್ಮ ಅಧಿಕಾರಾವಧಿಯ ಪ್ರತಿ ಹಣಕಾಸು ವರ್ಷ ನಿಯಮಿಸಬಹುದಾದ ವಿಧಾನದಲ್ಲಿ ಅವನು/ಅವಳು ಮತ್ತು ಅವನ/ಅವಳ ಕುಟುಂಬದ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸತಕ್ಕದ್ದು;

(ಎಲ್) ಸೌಹಾರ್ದ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪಡೆಯುವುದು ಮತ್ತು ಪರಾಮರ್ಶಿಸುವುದು;

(ಎಮ್) ಮುಖ್ಯ ಕಾರ್ಯನಿರ್ವಾಹಕರು ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸಲ್ಲಿಸಲು ವಿಫಲವಾದಲ್ಲಿ ಆಡಳಿತ ಮಂಡಲಿಯು ನಿಯಮಿಸಬಹುದಾಂಥ ವಿಧಾನದಲ್ಲಿ ಶಿಸ್ತುಕ್ರಮ ಕೈಗೊಳ್ಳತಕ್ಕದ್ದು;

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಅಭ್ಯರ್ಥಿ/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ನಿರ್ದೇಶಕ ಮತ್ತು ಅವನ/ಅವಳ ಪತ್ನಿ / ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**12. ಪ್ರಕರಣ 28ರ ತಿದ್ದುಪಡಿ.-** ಮೂಲ ಅಧಿನಿಯಮದ, 28ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯ ರಚನೆಯಾದ ದಿನಾಂಕದಿಂದ ಅಥವಾ ಸಾಮಾನ್ಯ ಚುನಾವಣೆಯ ನಂತರ ಮಂಡಲಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರಿ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಬಹುದಾದ ವಿಧಾನಲ್ಲಿ ಮಂಡಲಿಯ ಎಲ್ಲಾ ಸದಸ್ಯರ

ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(2) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪ ಚೇರ್‌ಪರ್ಸನ್ ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಲಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (1)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(4) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (1) ಮತ್ತು (2)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ಪ್ರಾಧಿಕಾರ ಅಥವಾ ಸಭೆಯನ್ನು ಕರೆಯಲು ಅದರ ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

(**ii**) ಹಾಗೆ ಪ್ರತಿಯೋಜಿಸಲಾದ ಉಪಪ್ರಕರಣ (1), (2), (3) ಮತ್ತು (4)ರ ತರುವಾಯ ಅಸ್ತಿತ್ವದಲ್ಲಿರುವ ಉಪಪ್ರಕರಣಗಳಾದ (2) ಮತ್ತು (3)ನ್ನು ಉಪಪ್ರಕರಣ (5) ಮತ್ತು (6)ಗಳೆಂದು ಮರುಸಂಖ್ಯೆ ನೀಡತಕ್ಕದ್ದು.

**13. ಪ್ರಕರಣ 29ರ ತಿದ್ದುಪಡಿ.-** ಮೂಲ ಅಧಿನಿಯಮದ 29ನೇ ಪ್ರಕರಣದಲ್ಲಿ,-

(i) "ಭರ್ತಿ ಮಾಡಿಕೊಳ್ಳಬಹುದು" ಎಂಬ ಪದಗಳ ಬದಲಾಗಿ "ಭರ್ತಿ ಮಾಡತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

**14. ಪ್ರಕರಣ 31ರ ತಿದ್ದುಪಡಿ.-** ಮೂಲ ಅಧಿನಿಯಮದ 31 ನೇ ಪ್ರಕರಣದ ಉಪಪ್ರಕರಣ (2) ರ ಖಂಡ (ಐ-6) ರ ತರುವಾಯ ಈ ಮುಂದಿನ (ಐ-7) ಅನ್ನು ಸೇರಿಸತಕ್ಕದ್ದು, ಎಂದರೆ:-

"(ಐ-7) ಪ್ರತಿ ಆರ್ಥಿಕ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವಳ/ಅವನ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸಲು ವಿಫಲರಾದ್ದಲ್ಲಿ.

**ವಿವರಣೆ.-** ಈ ಖಂಡದ ಉದ್ದೇಶಕ್ಕಾಗಿ 'ಕುಟುಂಬ' ಎಂದರೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**15. ಪ್ರಕರಣ 33ರ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಅರ್ಬನ್ ಕೋ ಅಪರೇಟಿವ್ ಬ್ಯಾಂಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸಹಕಾರಿಯು ಸಹಕಾರಿ ಲೆಕ್ಕ ಪರಿಶೋಧನಾ ನಿರ್ದೇಶಕರಿಂದ ಮೂರು ವರ್ಷಗಳಲ್ಲಿ ಒಂದು ಬಾರಿ ತನ್ನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು."

**16. ಪ್ರಕರಣ 38ರ ತಿದ್ದುಪಡಿ.-** ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿನ (1)ನೇ ಉಪ ಪ್ರಕರಣದ ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**17. ಪ್ರಕರಣ 38ಎ ತಿದ್ದುಪಡಿ.-** ಮೂಲ ಅಧಿನಿಯಮದ 38ಎ ಪ್ರಕರಣದಲ್ಲಿನ, (4)ನೇ ಉಪ ಪ್ರಕರಣದ ನಂತರ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(5) ಪ್ರಕರಣ 48ರ ಉಪ-ಪ್ರಕರಣ (6ಎ) ರಡಿಯಲ್ಲಿ ಉಪಬಂಧಿಸಲಾದಂತೆ ಸೌಹಾರ್ದ ಸಹಕಾರಿ ಸಂಘದ ಚುನಾವಣೆಯನ್ನು ನಡೆಸಲು ಸಂಯುಕ್ತ ಸಹಕಾರಿಯು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸತಕ್ಕದ್ದು."

**18. ಪ್ರಕರಣ 48ರ ತಿದ್ದುಪಡಿ.-** ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿನ (6)ನೇ ಉಪ ಪ್ರಕರಣದ ತರುವಾಯ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(6ಎ) ರಿಜಿಸ್ಟ್ರಾರ್‌ನು ಸೌಹಾರ್ದ ಸಹಕಾರಿ ಸಂಘದ ಸಮಾಪನೆಯ ಆದೇಶವನ್ನು ರದ್ದುಪಡಿಸುವ ಆದೇಶವನ್ನು ಹೊರಡಿಸಿದ ನಂತರ ಫೆಡರಲ್ ಸಹಕಾರಿಯು ಸಹಕಾರ ಸಂಘದ ಚುನಾವಣೆಯನ್ನು ನಡೆಸಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸತಕ್ಕದ್ದು."

**19. ಪ್ರಕರಣ 53ರ ತಿದ್ದುಪಡಿ.-** ಮೂಲ ಅಧಿನಿಯಮದ 53ನೇ ಪ್ರಕರಣದ, (7)ನೇ ಉಪಪ್ರಕರಣದ ಖಂಡ (ಯು) ರ ತರುವಾಯ ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ವಿ) ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು ಅಥವಾ ನೌಕರರು ಯಾವುದೇ ಅಕ್ರಮ ಅಥವಾ ದುರ್ವಿನಿಯೋಗ ಅಥವಾ ವಂಚನೆ ಮಾಡಿರುವುದು ಪ್ರಕರಣ 33 ಅಥವಾ 35 ಅಥವಾ ಪ್ರಕರಣ 53ರ ಉಪಪ್ರಕರಣ (7)ರ ಖಂಡ (ಯು) ರಡಿ ನೀಡಿದ ವರದಿಯಲ್ಲಿ ಕಂಡುಬಂದರೆ ಫೆಡರಲ್ ಸೌಹಾರ್ದ ಸಹಕಾರಿಯು ಸದರಿ ವರದಿಯಲ್ಲಿ ಒಳಗೊಂಡಿರುವ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡತಕ್ಕದ್ದು;

(ಡಬ್ಲ್ಯೂ) ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿ ಈ ಅಧಿನಿಯಮ ಮತ್ತು ಅದರಡಿ ರಚಿಸಿದ ನಿಯಮಗಳ ಉಪಬಂಧಗಳಡಿ ಸುತ್ತೋಲೆಗಳು/ನಿರ್ದೇಶನಗಳನ್ನು ಹೊರಡಿಸತಕ್ಕದ್ದು."

**20. ಪ್ರಕರಣ 54ರ ತಿದ್ದುಪಡಿ.-** ಮೂಲ ಅಧಿನಿಯಮದ 54ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಮೂರನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2-ಎ) ಮಂಡಲಿಯಲ್ಲಿ ಗರಿಷ್ಠ ಸದಸ್ಯರ ಸಂಖ್ಯೆ ಮತ್ತು ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದ 24ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಫೆಡರಲ್ ಸಹಕಾರಿಗೆ ಅನ್ವಯವಾಗತಕ್ಕದ್ದು."

**21. ಪ್ರಕರಣ 55ರ ತಿದ್ದುಪಡಿ.-** ಮೂಲ ಅಧಿನಿಯಮದ 55ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡ (ಇ) ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಪ್ರತಿ ಆರ್ಥಿಕ ವರ್ಷದ ಅಂತ್ಯಕ್ಕೆ ಅವನು/ಅವಳು ಮತ್ತು ಅವಳ/ಅವನ ಕುಟುಂಬದವರ ಆಸ್ತಿ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಸಲ್ಲಿಸಲು ವಿಫಲವಾದರೆ;

**ವಿವರಣೆ**.- ಈ ಖಂಡದ ಉದ್ದೇಶಕ್ಕಾಗಿ 'ಕು ಂಬ' ಎಂದರೆ ``ನಿರ್ದೇಶಕ ಅವನ/ಅವಳ ಪತ್ನಿ/ಪತಿ, ಅವಿವಾಹಿತ ಮಗಳು ಮತ್ತು ಅವಿಭಕ್ತ ಮಗ."

**22. 58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 58ನೇ ಪ್ರಕರಣದ,-

(i) (1)ನೇ ಉಪ ಪ್ರಕರಣದಲ್ಲಿನ "ಮತ್ತು ಪದಾಧಿಕಾರಿಗಳ ಪದಕ್ಕೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) (4)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಮುಖ್ಯ ಕಾರ್ಯನಿರ್ವಾಹಕನು ಮಂಡಲಿಯು ರಚನೆಯಾದ ದಿನಾಂಕದಿಂದ ಅಥವಾ ಸಾಮಾನ್ಯ ಚುನಾವಣೆಯ ನಂತರ ಮಂಡಲಿಯು ರಚನೆಯಾಗಿದೆಯೆಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ, ತಕ್ಷಣವೇ ಸಹಕಾರ ಸಂಘಗಳ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಅಗತ್ಯಪಡಿಸಲಾದಂಥ ಇತರ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ನಿಯಮಿಸಿದ ರೀತಿಯಲ್ಲಿ ಮಂಡಲಿಯ ಎಲ್ಲಾ ಸದಸ್ಯರ ಸಭೆಯನ್ನು ಕರೆಯತಕ್ಕದ್ದು. ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಚುನಾವಣೆಗಾಗಿ ಅಭ್ಯರ್ಥಿಯಾಗಿರದ ಸದಸ್ಯರಲ್ಲಿ ಒಬ್ಬರನ್ನು ಅಂಥ ಸಭೆಯ ಅಧ್ಯಕ್ಷತೆ ವಹಿಸುವುದಕ್ಕೆ ಆಯ್ಕೆ ಮಾಡತಕ್ಕದ್ದು:

ಪರಂತು ಸಹಕಾರಿಯ ನೋಂದಣಿಯ ತರುವಾಯ ನಡೆದ ಮೊದಲ ಸಾಮಾನ್ಯ ಸಭೆಯಲ್ಲಿ ಚುನಾಯಿತರಾದ ಪ್ರಥಮ ಮಂಡಲಿಯ ಸದಸ್ಯರು ನಿಯಮಿಸಬಹುದಾದಂಥ ರೀತಿಯಲ್ಲಿ ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪಚೇರ್‌ಪರ್ಸನ್ ಮತ್ತು ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡತಕ್ಕದ್ದು.

(6) ಮುಖ್ಯ ಕಾರ್ಯನಿರ್ವಾಹಕನು ಅಧ್ಯಕ್ಷ ಅಥವಾ ಚೇರ್‌ಪರ್ಸನ್, ಉಪಾಧ್ಯಕ್ಷ ಅಥವಾ ಉಪ ಚೇರ್‌ಪರ್ಸನ್ ಅಥವಾ ಇತರ ಪದಾಧಿಕಾರಿಗಳ ಪದವು ಆಕಸ್ಮಿಕವಾಗಿ ಖಾಲಿಯಾದಾಗಲೆಲ್ಲಾ, ಅಂಥ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವ ಉದ್ದೇಶಕ್ಕಾಗಿ ಮಂಡಲಿಯ ಸದಸ್ಯರ ಸಭೆಯನ್ನು ಕರೆಯತಕ್ಕದ್ದು ಮತ್ತು ಉಪಪ್ರಕರಣ (5)ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(7) ಮುಖ್ಯ ಕಾರ್ಯನಿರ್ವಾಹಕನು, ಸಭೆಯ ದಿನಾಂಕದಿಂದ ಮೂರು ದಿನಗಳ ಒಳಗಾಗಿ ಸಭೆ ಕರೆಯುವ ನೋಟೀಸಿನ ಒಂದು ಪ್ರತಿಯನ್ನು ಹಾಗೂ ಸಭೆಯ ನಡಾವಳಿಗಳ ಒಂದು ಪ್ರತಿಯನ್ನು ಸಹ ರಿಜಿಸ್ಟ್ರಾರರಿಗೆ ಹಾಗೂ ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(8) ಮುಖ್ಯ ಕಾರ್ಯನಿರ್ವಾಹಕನು ಉಪಪ್ರಕರಣ (5) ಮತ್ತು (6)ರ ಅನುಸಾರವಾಗಿ ಸಭೆ ಕರೆಯಲು ವಿಫಲವಾದರೆ ಸಹಕಾರಿ ಚುನಾವಣಾ ಪ್ರಾಧಿಕಾರ ಅಥವಾ ಸಭೆಯನ್ನು ಕರೆಯಲು ಅದರ

ಮೂಲಕ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಸದರಿ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗಾಗಿ ಸಭೆಯನ್ನು ಕರೆಯತಕ್ಕದ್ದು."

**23. 59ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 59ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**24. 60ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 60ನೇ ಪ್ರಕರಣದಲ್ಲಿನ ಉಪಪ್ರಕರಣ (3ಎ) ರಲ್ಲಿನ "ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ" ಎಂಬ ಪದಗಳ ಬದಲಿಗೆ " ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದ ಅಥವಾ ಒಂದು ಸಾವಿರ ಯಾವುದು ಕಡಿಮೆಯೋ ಅದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**
**NOTIFICATION**
**NO.DPAL 51 SHASHANA 2025, BENGALURU, DATED:12.09.2025**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:74) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO.74 OF 2025

(First Published in the Karnataka Gazette Extra-ordinary on the 12th day of September, 2025)

## THE KARNATAKA SOUHARDA SAHAKARI (AMENDMENT) ACT, 2025

(Received the assent of the Governor on the 11th day of September, 2025)

An Act further to amend the Karnataka Souharda Sahakari Act, 1997.

Whereas, it is expedient further to amend the Karnataka Souharda Sahakari Act, 1997 (Karnataka Act 17 of 2000) for the purposes hereinafter appearing.

Be it enacted by the Karnataka State legislature in the seventy sixth year of the republic of India, as follows:-

**1. Short title and Commencement.-** (1) This Act may be called the Karnataka Souharda Sahakari (Amendment) Act, 2025.

(2) It shall come into force at once.

**2. Amendment of section 2.-** In the Karnataka Souharda Sahakari Act, 1997 (Karnataka Act 17 of 2000) (hereinafter referred to as the Principal Act) in section 2, after clause (y),the following shall be inserted, namely:-

**"(z) "State Statutory Liquidity Reserve"** means as specified in section 17B.**"**

**3. Amendment of section 17.-** In the Principal Act, in section 17, after second proviso, the following shall be inserted, namely:-

"Provided also that no Souharda Co-operative societies undertaking credit activities shall not utilize the mobilized deposit for non-credit activities other than lending and investments."

**4. Insertion of new section 17-B.-** In the Principal Act, after section 17A, the following shall be inserted, namely:-

**"17-B. Maintenance of State Statutory Liquidity Reserve.-** Every souharda cooperative shall mandatorily maintain 20% of the total deposits held by it at the end of each co-operative year maintained as State Statutory Liquidity reserve as per section 18, except Souharda Cooperative Banks."

**5. Substitution of section 18.-** In the Principal Act, for section 18, the following shall be substituted, namely:-

"**18. Investment of Funds.-** Such of its funds as are not immediately required for use by a co-operative, shall be invested or deposited outside its business, namely:-

(a) With the Karnataka State Co-operative Apex Bank Ltd. or District Central Co-operative Bank Ltd or Urban Co-operative Bank; and

(b) With any scheduled bank regulated by the Reserve Bank of India with the prior permission of the Registrar."

**6. Amendment of section 20B.-** In the Principal Act, in section 20B, in clause (c), after sub-clause (ii), the following sub-clause shall be inserted, namely:-

"(iii) Notwithstanding anything contained in this Act or Bye-laws made thereunder, in the Election of the Board of Secondary Co-operative or Federal Co-operative or Apex Co-operative to the reserved seats, irrespective of any class of voters of the said Cooperatives they shall be entitled to exercise their votes, in the manner as may be prescribed."

**7. Amendment of section 23.-** In the Principal Act, in section 23, in sub section (3), after clause (k-3) the following clause shall be inserted, namely:-

"(k-4) Review of the list of board of directors who have borrowed loans from the cooperative and other top twenty defaulting borrowers."

**8. Amendment of section 24.-** In the Principal Act, in section 24, for the beginning paragraph and clause (1) and the entries relating thereto, the following shall be substituted, namely:-

" (1) The Board of Souharda Co-operative Society shall consists of not less than thirteen members excluding the Chief Executive, but not exceeding the number of members as may be prescribed;

Provided that, one seat shall be reserved in favour of members belonging to the scheduled castes and one seat for the members belonging to the scheduled tribes, two seats shall be reserved in favour of women members and two seats shall be reserved in favour of members belonging to backward classes as may be notified by the State Government, on the board of every primary, secondary or union and apex co-operative society.

Provided further that, respective Co-operative shall make provisions in the bye-laws with previous approval of the Registrar to increase the number of seats in the Board of secondary or union and apex co-operative society if their number of board of directors exceeds the limit as specified in sub-section (1).

Provided also that, every co-operative shall co-opt persons having experience in the field of banking, management, finance or specialization in any other field relating to the objects and activities undertaken by the co-operative, as members of the board of such co-operative and such co-opted members shall not have the right to vote in any election of the co-operative in their capacity as such member or to be eligible to be elected as office bearers of the board.

Provided also that, the number of such co-opted members shall not exceed two in addition to maximum number of directors specified in sub-section (1).

Provided also that, not more than three functional directors if necessary of a cooperative shall also be the members of the board and such members shall be excluded for the purpose of counting the total number of directors specified in the sub-section (1)."

**9. Amendment of section 25.-** In the Principal Act, in section 25, in sub section (1), after clause (f), the following new clause shall be inserted, namely:-

"(g) If he/she fails to declare and submit his/her family assets and liabilities statement by end of every cooperative year.

**Explanation-** For the purpose of this clause "family" means "Director and his/her spouse, unmarried daughter and undivided son."

**10. Amendment of section 26.-** In the Principal Act, in section 26,-

(i) after sub-section (1), the following shall be inserted, namely:-

"(1A) Every candidate contesting for the Election of the Board shall, at the time of filing his nomination, file a declaration of his/her and his/her family's assets and liabilities in the manner as may be prescribed.

(1B) Every elected director of the Board shall submit a declaration of assets and liabilities of his/her and his/her family for each financial year of his tenure in the manner as may be prescribed.

**Explanation**- For the purpose of this sub-section "Family" means Candidate and his/her Spouse, Unmarried Daughter and Undivided Son."

(ii) for sub-section (2) the following shall be substituted, namely:-

"(2) Subject to provisions of this Act, the procedure and guidelines for conducting elections to Souharda Co-operative Societies by the Co-operative Election Authority as may be prescribed."

**11. Amendment of section 27.-** In the Principal Act, in section 27, after clause (j), the following clauses (k) (l) and (m) shall be inserted, namely:-

"(k) Every elected director of the Board shall submit a declaration of assets and liabilities of his/her and his/her family for each financial year of his/her tenure as in the manner as may be prescribed.

(l) to collect and review the assets and liabilities of Chief Executive of the souharda co-operative society.

(m) if the Chief Executive fails to submit the assets and liabilities to the Board, the Board shall take disciplinary action on Chief Executive such manner as may be prescribed.

**Explanation:** For the purpose of this clause "family" means Candidate/Chief Executive Officer/Director and his/her Spouse, Unmarried Daughter and Undivided Son."

**12. Amendment of section 28.-** In the Principal Act, in section 28,-

(i) for sub-section (1), the following shall be substituted, namely:-

"(1) The Chief Executive shall within fifteen days from the date of constitution or deemed constitution of the Board after a general election and immediately before the expiry of the term of office of the President or Chairperson, Vice-President or Vice-Chairperson and any other office- bearers, convene a meeting in the manner as may be prescribed of all members of the committee for the purpose of electing President or Chairperson, Vice-President or Vice-chairperson and such any other office bearers as are required to be elected under the bye-laws of the souharda co-operative society. One of the members who is not a candidate for the election of President or Chairperson, Vice-president or Vice-Chairperson or any office bearer shall be chosen to preside over such meeting:

Provided that, the Members of the first Board elected in the first general election held after the registration of a co-operative, shall elect the President or Chairperson, Vice-President or Vice-Chairperson and other office bearers in such manner as may be prescribed.

(2) The Chief Executive shall, as and when there is a casual vacancy in the office of the President or Chairperson, Vice-President or Vice- Chairperson or other office bearers convene a meeting of the members of the Board for the purpose of filling up the casual vacancy and the provisions of sub-section (1) shall mutatis mutandis apply.

(3) The Chief Executive shall, within three days from the date of the meeting, forward to the Registrar and Co-operative election authority a copy of the notice convening the meeting and also a copy of the proceedings of the meeting.

(4) If the Chief Executive fails to convene the meeting in accordance with sub-sections (1) and (2), the Co-operative election authority or any officer authorized by it to do so shall convene a meeting for the purposes specified in the said sub-sections."; and

(ii) after sub-sections (1), (2) (3) and (4) as so substituted, the existing sub-sections (2) and (3) shall be re-numbered as (5) and (6).

**13. Amendment of section 29.-** In the Principal Act, in section 29,-

(i) for the words " may fill" the words "shall fill" be substituted; and

(ii) the words "if the remaining term of office of the board is less than half of its original term" shall be omitted.

**14. Amendment of section 31.-** In the Principal Act, in section 31, in sub-section (2) after clause (i-6) the following clause (i-7) shall be inserted, namely:-

"(i-7) If he/she fails to submit every financial year the declaration of assets and liabilities of his/her and his/her family.

**Explanation:-** For the purpose of this clause "family" means "Chief Executive Officer and his/her Spouse, Unmarried Daughter and Undivided Son."

**15. Amendment of section 33.-** In the Principal Act, in section 33, after sub-section (1), the following shall be inserted, namely:-

"(1-A) Notwithstanding anything contained in sub-section (1), except urban co-operative banks, once in an every three years every co-operative shall get its accounts audited by the Director of Co-operative Audit."

**16. Amendment of section 38.-** In the Principal Act, in section 38, in sub-section (1), second proviso shall be omitted.

**17. Amendment of section 38A.-** In the Principal Act, in section 38A, after sub- section (4), the following sub-section shall be inserted, namely:-

"(5) The Federal Cooperative shall appoint a Special Officer to conduct the elections of the Souharda Cooperative Society as provided under sub-section (6-A) of section 48."

**18. Amendment of section 48.-** In the Principal Act, in section 48, after sub- section (6), the following sub-section shall be inserted, namely:-

"(6-A) After issuing the Order for cancelling the order issued by the registrar Co-operative society for winding up of the society, the Federal Co-operative shall appoint a special officer to conduct the election of the Co-operative Society."

**19. Amendment of section 53.-** In the Principal Act, in section 53, in sub-section (7), after clause (u) the following clauses shall be inserted, namely:-

"(v) The Board of directors or employees of any Souharda Cooperatives commits any irregularities or misappropriation or fraudulence reported under sections 33 or 35 or clause (u) of sub-section (7) of section 53, the Souharda Federal shall file a criminal case against the persons involved in the said reports.

(w) The Souharda Federal shall issue circulars/directions in respect of working of member Cooperatives under the provisions of this Act and rules made thereunder."

**20. Amendment of section 54.-** In the Principal Act, in section 54, in sub-section (2) after third proviso, the following shall be inserted, namely:-

"(2-A) The provisions of section 24 related to the Maximum number of board members and reservation of seats in the Board shall mutatis-mutandis apply to the Federal Co-operative."

**21. Amendment of section 55.-** In the Principal Act, in section 55, in sub-section (2) after clause (e) the following clause shall be inserted, namely:-

"(f) If he/she fails to submit every financial year the declaration of assets and liabilities of his/her and his/her family.

**Explanation**:- For the purpose of this clause "family" means "Director and his/her Spouse, Unmarried Daughter and Undivided Son."

**22. Amendment of section 58.-** In the Principal Act, in section 58,-

(i) in sub-section (1),the words "and the office of the office bearers" shall be omitted; and

(ii) after sub-section (4), the following shall be inserted, namely:-

"(5) The Chief Executive shall, within fifteen days from the date of constitution or deemed constitution of the Board after a general election and immediately before the expiry of the term of office of the President or Chairperson, Vice-President or Vice-Chairperson, convene a meeting in the prescribed manner of all the members of the committee for the purpose of electing President or Chairperson, Vice-President or Vice-chairperson and such others as are required to be elected under the bye-laws of the federal co-operative. One of the members who is not a candidate for the election of President or Chairperson, Vice-president or Vice-Chairperson, shall be chosen to preside over such meeting:

Provided that, the Members of the first Board elected in the first general meeting held after the registration of a co-operative shall elect the President or Chairperson, Vice-President or Vice-Chairperson and others in such manner as may be prescribed.

(6) The Chief Executive shall, as and when there is a casual vacancy in the office of the President or Chairperson, Vice-President or Vice-Chairperson or others, convene a meeting of the members of the Board for the purpose of filling up the casual vacancy and the provisions of sub-section (5) shall mutatis mutandis apply.

(7) The Chief Executive shall within three days from the date of the meeting, forward to the Registrar and Co-operative Election Authority a copy of the notice convening the meeting and also a copy of the proceedings of the meeting.

(8) If the Chief Executive fails to convene the meeting in accordance with sub-sections (5) and (6), the Co-operative Election Authority or any officer authorized by it to do so, shall convene a meeting for the purposes specified in the said sub-sections.

**23. Amendment of section 59.-** In the Principal Act, in section 59, the proviso shall be omitted.

**24. Amendment of section 60.-** In the Principal Act, in section 60, in sub-section (3A) for the words "twenty percent of the members", the words "ten percent of the members or one thousand whichever is less, those members" shall be substituted.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 74) be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು